2019647/2020
11/12/2020

**File No.DPAR/126/EGM/2020-DESK1-dparegovsec**

**GOVERNMENT OF KARNATAKA**

No. DPAR 126 EGM 2020

Karnataka Government Secretariat,
M.S.Building,
Bengaluru, dated:11-12- 2020

**NOTIFICATION**

Government Order No. DPAR 126 EGM 2020, dated 5th December 2020 has mandated all Government Departments, Boards, Corporations and Autonomous Bodies to capture Family ID (Ration Card number) of domicile residents applying to avail benefits or seeking services from the Government. The Government through a Notification with the approval of the Steering Committee chaired by Additional Chief Secretary to Government would enable all Government Departments, Boards, Corporations and Autonomous Bodies to adopt family ID.

Now therefore, the following Departments / Schemes / Services mentioned in Schedule 'A' to mandatorily capture Family ID of the domicile resident applying to avail benefits or seeking services from the Government.

The Department of Personnel and Administrative Reforms (e-Governance) from time to time in the form of guidelines / directions / Circular / Government Order / Notifications may issues procedure / process to be followed by various stakeholders in adopting Family ID. The following Government Departments, Boards, Corporations and Autonomous Bodies mentioned in Schedule 'A' shall necessarily follow the procedure and process for use of Family ID issued by the Department of Personnel and Administrative Reforms (e-Governance) from time to time.

**SCHEDULE 'A'**

| Sl. No. | Names of Department / Corporations / Boards / Autonomous Bodies | IT System |
|---|---|---|
| 1 | Revenue Department - Department of Social Security Pensions | Benificiary Management System (BMS) |
| 2 | Revenue Department - Directorate of Atalji Janasnehi Kendra | Nada Kacheri |
| 3 | Health and Family Welfare Department | 1. Ayushman Bharat Arogya Karnataka<br>2. Reproductive and Child Health (RCH) |
| 4 | Housing Department - Rajiv Gandhi Rural Housing Corporation | Ashraya |
| 5 | Primary and Secondary Education Department - Public Instruction Department | Student Achievement Tracking System (SATS) |

File No.DPAR/126/EGM/2020-DESK1-dparegovsec

| | | |
|---|---|---|
| 6 | Planning, Programming and Monitoring and Statistics Department - Directorate of Economic and Statistics Department | e-Janma |

By order and in the name of the
Governor of Karnataka

(Shanthi.R)
Desk Officer-3
Department of Personnel and
Administrative Reforms (e-Governance)

To:
The Compiler, Karnataka Gazette for publication in the next issue of the Special Gazette and supply 50 copies to this Department.

Copy to:

1. The Additional Chief Secretary to Government, Revenue Department, M.S.Building, Bengaluru.
2. The Additional Chief Secretary to Government, Planning, Programming Monitoring and Statistics Department, M.S.Building, Bengaluru.
3. The Principal Secretary to Government, Primary and Secondary Education Department, M.S.Building, Bengaluru
4. The Principal Secretary to Government, Health and Family Welfare Department, Vikasa Soudha, Bengaluru
5. The Secretary to Government, Housing Department, Vikasa Soudha, Bengaluru
6. The Chief Executive Officer, Centre for e-Governance, M.S. Building, Bengaluru
7. All the Heads of Department / Corporations and Centres- through the concerned Additional Chief Secretary / Principal Secretary / Secretary to Government
8. The Private Secretary to Additional Chief Secretary to Government, Department of Personnel and Administrative Reforms (e-Governance).
9. The Personal Assistant to Additional Secretary to Government, Department of Personnel and Administrative Reforms (e-Governance).
10. Departmental website.
11. Section guard file.

**ಕರ್ನಾಟಕ ಸರ್ಕಾರ**

ಸಂಖ್ಯೆ:ಸಿಆಸುಇ 126 ಇಜಿಎಂ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:11-12- 2020

**ಅಧಿಸೂಚನೆ**

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 126 ಇಜಿಎಂ 2020, ದಿನಾಂಕ:05.12.2020ರಲ್ಲಿ ರಾಜ್ಯ ಸರ್ಕಾರದ ಎಲ್ಲಾ ಇಲಾಖೆ, ನಿಗಮ, ಮಂಡಳಿ ಹಾಗೂ ಸ್ವಾಯತ್ತ ಸಂಸ್ಥೆಗಳು ಸರ್ಕಾರದ ಸೇವೆ / ಸೌಲಭ್ಯ ಬಯಸುವ ರಾಜ್ಯದ ನಿವಾಸಿ ನಾಗರಿಕರ ಕುಟುಂಬ ಗುರುತಿನ ಸಂಖ್ಯೆ (ಪಡಿತರ ಚೀಟಿ ಸಂಖ್ಯೆ)ಯನ್ನು ಕಡ್ಡಾಯವಾಗಿ ಪಡೆಯಲು ಆದೇಶಿಸಿದೆ. ಈ ಆದೇಶದಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ನೇತೃತ್ವದ ಚಾಲನಾ ಸಮಿತಿಯ ಒಪ್ಪಿಗೆ ಪಡೆದು, ಅಧಿಸೂಚನೆಯ ಮುಖಾಂತರ ಸರ್ಕಾರದ ಎಲ್ಲಾ ಇಲಾಖೆ, ನಿಗಮ, ಮಂಡಳಿ ಹಾಗೂ ಸ್ವಾಯತ್ತ ಸಂಸ್ಥೆಗಳು ಕುಟುಂಬ ಗುರುತಿನ ಯೋಜನೆಗೆ ಒಳಪಡುವಂತೆ ಅಧಿಸೂಚಿಸಬಹುದಾಗಿದೆ.

ಅದರಂತೆ, ಈ ಕೆಳಕಂಡ ಷೆಡ್ಯೂಲ್-ಎ ರಲ್ಲಿ ಹೆಸರಿಸಲಾಗಿರುವ ಇಲಾಖೆಗಳು ಒದಗಿಸುವ ಸೇವೆಗಳನ್ನು ಪಡೆಯುವ ಅಥವಾ ಸೌಲಭ್ಯಗಳಿಗಾಗಿ ಅರ್ಜಿ ಸಲ್ಲಿಸುವ ರಾಜ್ಯದ ನಿವಾಸಿ ನಾಗರಿಕರಿಂದ ಕುಟುಂಬ ಗುರುತಿನ ಸಂಖ್ಯೆ (ಪಡಿತರ ಚೀಟಿ) ಯನ್ನು ಪಡೆದು ಇಲಾಖಾ ದತ್ತಸಂಚಯಗಳಲ್ಲಿ ಸಂಯೋಜಿಸುವುದನ್ನು ಕಡ್ಡಾಯಗೊಳಿಸುವಂತೆ ಈ ಮೂಲಕ ಅಧಿಸೂಚಿಸಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)ಯು ಕಾಲಕಾಲಕ್ಕೆ ಮಾರ್ಗಸೂಚಿ / ನಿರ್ದೇಶನ / ಸುತ್ತೋಲೆ / ಸರ್ಕಾರಿ ಆದೇಶ / ಅಧಿಸೂಚನೆ ಮೂಲಕ ಕುಟುಂಬ ಗುರುತಿನ ಸಂಖ್ಯೆಯನ್ನು ಅಳವಡಿಸಿಕೊಳ್ಳಲು ಸಂಬಂಧಿಸಿದ ಸಂಸ್ಥೆಗಳು ಅನುಸರಿಸಬೇಕಾದ ಪ್ರಕ್ರಿಯೆ / ಕಾರ್ಯವಿಧಾನಗಳನ್ನು ಹೊರಡಿಸುತ್ತದೆ. ಈ ಕೆಳಕಂಡ ಷೆಡ್ಯೂಲ್-"ಎ"ನಲ್ಲಿರುವ ಸರ್ಕಾರಿ ಇಲಾಖೆ, ನಿಗಮ, ಮಂಡಳಿ ಹಾಗೂ ಸ್ವಾಯತ್ತ ಸಂಸ್ಥೆಗಳು ಕುಟುಂಬ ಗುರುತಿನ ಸಂಖ್ಯೆಯನ್ನು ಅಳವಡಿಸಿಕೊಳ್ಳುವ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ-ಆಡಳಿತ)ಯು ಕಾಲಕಾಲಕ್ಕೆ ನೀಡುವ ಪ್ರಕ್ರಿಯೆ / ಕಾರ್ಯವಿಧಾನಗಳನ್ನು ತಪ್ಪದೆ ಪಾಲಿಸುವಂತೆ ಸೂಚಿಸಲಾಗಿದೆ.

**ಷೆಡ್ಯೂಲ್ – "ಎ"**

| ಕ್ರಮ ಸಂಖ್ಯೆ | ಇಲಾಖೆ / ನಿಗಮ / ಮಂಡಳಿ / ಸ್ವಾಯತ್ತ ಸಂಸ್ಥೆಗಳ ಹೆಸರು | ಐಟಿ ವ್ಯವಸ್ಥೆ |
|---|---|---|
| 1 | ಕಂದಾಯ ಇಲಾಖೆ - ಸಾಮಾಜಿಕ ಭದ್ರತೆ ಹಾಗೂ ಪಿಂಚಣಿ ನಿರ್ದೇಶನಾಲಯ | ಫಲಾನುಭವಿ ನಿರ್ವಹಣೆ ವ್ಯವಸ್ಥೆ (ಬಿಎಂಎಸ್) |
| 2 | ಕಂದಾಯ ಇಲಾಖೆ - ಅಟಲ್ ಜನಸ್ನೇಹಿ ಕೇಂದ್ರ | ನಾಡ ಕಛೇರಿ |
| 3 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 1.ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ<br>2. ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ (RCH) |
| 4 | ವಸತಿ ಇಲಾಖೆ - ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ | ಆಶ್ರಯ |
| 5 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ - ಸಾರ್ವಜನಿಕ ಶಿಕ್ಷಣ ಇಲಾಖೆ | ವಿದ್ಯಾರ್ಥಿ ಸಾಧನೆಯ ಟ್ರ್ಯಾಕಿಂಗ್ ವ್ಯವಸ್ಥೆ (SATS) |

**File No.DPAR/126/EGM/2020-DESK1-dparegovsec**

| | | |
|---|---|---|
| 6 | ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ - ಆರ್ಥಿಕ, ಸಾಂಖ್ಯಿಕ ಹಾಗೂ ಯೋಜನಾ ನಿರ್ದೇಶನಾಲಯ | ಇ-ಜನ್ಮ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
R. [signature]
(ಶಾಂತಿ.ಆರ್.)
ಪೀಠಾಧಿಕಾರಿ-3
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
ಇಲಾಖೆ(ಇ-ಆಡಳಿತ)

**ಇವರಿಗೆ:**
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು- ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಅದರ 50 ಪ್ರತಿಗಳನ್ನು ಈ ಇಲಾಖೆಗೆ ಒದಗಿಸುವಂತೆ ಕೋರಲಾಗಿದೆ.

**ಪ್ರತಿ**:
1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ಮುಖ್ಯಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರುಗಳಿಗೆ / ಕೇಂದ್ರ / ನಿಗಮ – ಮುಖ್ಯಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ ಇವರ ಮುಖಾಂತರ.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
10. ಇಲಾಖಾ ವೆಬ್ ಸೈಟ್.
11. ಶಾಖಾ ರಕ್ಷ ಕಡತ.